**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಕೊಪ್ಪ**

**ಸಿ.ಸಿ. ಸಂಖ್ಯೆಃ 598/2024**

ಪಿರ್ಯಾದಿ : ಕೊಪ್ಪ ಪೊಲೀಸ್ ಠಾಣೆ,

ವಿರುದ್ಧ

ಆರೋಪಿ: ಪೃಥ್ವಿರಾಜ್ ಬಿನ್ ಪಂಡಿತ್, 22 ವರ್ಷ, ಸೆಂಟ್ರಿಂಗ್ ಕೆಲಸ, ವಾಸ ಕುವೆಂಪು ನಗರ, ಹರಂದೂರು ಗ್ರಾಮ, ಕೊಪ್ಪ ತಾಲ್ಲೂಕು.

**<u>ಆರೋಪಣೆ</u>**

ದಿನಾಂಕ 11.06.2024 ರಂದು ಸಂಜೆ 07.45 ಗಂಟೆ ಸಮಯದಲ್ಲಿ ಚಾಸಾ.1 ಶ್ರೀ ಬಸವರಾಜ್ ಜಿ.ಕೆ., ರವರು ಚಾಸಾ.4 ಮತ್ತು 5 ರವರೊಂದಿಗೆ ಕೊಪ್ಪ ಠಾಣಾ ಸರಹದ್ದಿನ ಹರಂದೂರು ಗ್ರಾಮದ ಕುವೆಂಪು ನಗರ 2 ನೇ ಕ್ರಾಸ್ ಬಳಿ ಗಸ್ತು ಕಾರ್ಯ ನಿರ್ವಹಿಸುತ್ತಿದ್ದಾಗ ಆರೋಪಿಯಾದ ನೀವು ಅಮಲು ಪದಾರ್ಥ ಸೇವನೆ ಮಾಡಿ ಸಾರ್ವಜನಿಕ ರಸ್ತೆಯಲ್ಲಿ ತೂರಾಡುತ್ತಾ ಹೋಗುತ್ತಿದ್ದು ಅವರು ನಿಮ್ಮನ್ನು ಹಿಡಿದು ಪರಿಶೀಲನೆ ಮಾಡಿದಾಗ ನೀವು ಅಮಲು ಪದಾರ್ಥವನ್ನು ಸೇವಿಸಿರುವುದಾಗಿ ಅವರಿಗೆ ಕಂಡು ಬಂದಿದ್ದರಿಂದ ಅವರು ನಿಮ್ಮ ಮೂತ್ರವನ್ನು ವೈದ್ಯರಿಂದ ಪರೀಕ್ಷೆ ಮಾಡಿಸಿ ವರದಿ ಪಡೆದಾಗ Marijuana positive (CARD METHOD) ಎಂಬುದಾಗಿದ್ದು, ನೀವು ಮಾದಕ ವಸ್ತುವಾದ ಗಾಂಜಾವನ್ನು ಸೇವನೆ ಮಾಡಿರುವುದು ಕಂಡು ಬಂದಿರುತ್ತದೆ. ಇದರಿಂದಾಗಿ ಆರೋಪಿಯಾದ ನೀವು ನಿದ್ರಾಜನಕ ಔಷಧಗಳು ಮತ್ತು ಮನೋದ್ರೇಕಕಾರಿ ವಸ್ತುಗಳ ಅಧಿನಿಯಮ, 1985 (ನಾರ್ಕೋಟಿಕ್ಸ್ ಡ್ರಗ್ಸ್ ಅಂಡ್ ಸೈಕೋಟ್ರೋಪಿಕ್ ಸಬ್ ಸ್ಟೇನ್ಸಸ್ (ಎನ್.ಡಿ.ಪಿ.ಎಸ್.) ಕಲಂ **27(b)**ರ ಅಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ನನ್ನ ಸಂಜ್ಞೆಯೊಳಗೆ ಮಾಡಿರುತ್ತೀರೆಂದು ಆರೋಪಣೆ ಹೊರಿಸಲಾಗಿದೆ.

ಪ್ರಶ್ನೆ.1: ನಿಮಗೆ ಓದಿ ಹೇಳಿದ ಆರೋಪಣೆಯು ಅರ್ಥವಾಗಿದೆಯೆ?

ಉತ್ತರ : ತಿಳಿಯಿತು.

ಪ್ರಶ್ನೆ.2: ನೀವು ತಪ್ಪು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ನಡೆಸುವಿರೋ?

ಉತ್ತರ : ಒಪ್ಪಿಕೊಳ್ಳುತ್ತೇನೆ.

(ಮೇಲ್ಕಂಡ ಆರೋಪಣೆಯನ್ನು ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಅವರಿಂದ ಬಂದ ಸಮರ್ಪಕವಾದ ಉತ್ತರಗಳನ್ನು ಪಡೆದು ದಾಖಲಿಸಿಕೊಳ್ಳಲಾಯಿತು ಎಂದು ಈ ಮೂಲಕ ದೃಢೀಕರಿಸುತ್ತೇನೆ.)

ದಿನಾಂಕ 09.06.2026.

ಸಹಿ/- 09.06.2026.
(ಶ್ರೀಮತಿ ನಂದಿನಿ ಎಂ.ಎನ್.,)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.,ಕೊಪ್ಪ